ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅ) ಇಲ್ಲ.

ಆ) ''ಅ"ಗೆ ನೀಡಿದ ಉತ್ತರದಿಂದ ಇದಕ್ಕೆ ಉತ್ತರ ನೀಡುವ ಅವಶ್ಯಕತೆಯಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಬೆಳಗಾಂ ತಾಲ್ಲೂಕು ಬರಗಾಲದ ಪಟ್ಟಿಯಲ್ಲಿ ಸೇರಿಲ್ಲ ವಾದ್ದರಿಂದ ಅಲ್ಲಿ ಕೆಲಸ ಮಾಡಿಲ್ಲ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಂತ್ರಿ ಕಾರ್ಯದರ್ಶಿಗಳ ವರದಿಯ ಮೇಲೆ, ಮಳೆಯ ಆಧಾರದ ಮೇಲೆ ಬೆಳಗಾಂ ತಾಲ್ಲೂಕನ್ನು ಇದುವರೆವಿಗೂ ಅಭಾವ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿಲ್ಲ. ಇನ್ನು ಮುಂದಿನ ಪರಿಸ್ಥಿತಿಯನ್ನು ನೋಡಿ ಮಳೆ ಆಗದೇ ಇದ್ದರೆ ಹಾಗೂ ಬೆಳೆಗೆ ತೊಂದರೆಯಾದರೆ ಅಭಾವ ಪರಿಸ್ಥಿತಿ ಪ್ರದೇಶವೆಂದು ತಿಳಿದು ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

SRI B.I. PATIL.— There is severe drought condition in Belgaum taluk. The main crop is paddy which require a minimum rain of 45''. But this year the average rainfall is around 30''. In view of this I request the Government to declare this taluka as scarcity affected and scarcity relief measures be taken up immediately.

SRI S.R. BOMMAI. — In Belgaum district, scarcity is there in seven taluks. I will get fresh reports and if necessary, we will take up scarcity relief measures.

SRI B.I. PATIL — The hon. Minister for Industrial Co-operation has visited some spots and he has observed drought condition prevailing there. Last year also in some areas in Belgaum and Khanapur Taluks ie., in about 120 villages I think revenue assessment was suspended. No single scarcity work has been started there. People are feeling that they are being treated as second citizens by theGovernment. This year such thing should not happen.

SRI S.R. BOMMAI.— So far as Khanapur is concerned there is failure of crop.The Government has asked to start scarcity work in Khanapur taluk and a Central Team will be visiting Khanapur taluk on 15th.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಭೂನ್ಯಾಯ ಮೇಲ್ಮನವಿ ಮಂಡಲಿ

೭೭೯. ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಭೂನ್ಯಾಯ ಮೇಲ್ಮನವಿ ಮಂಡಳಿ ಸ್ಥಾಪನೆಯಾದಂದಿನಿಂದ ಈ ವರೆವಿಗೆ ದಾಖಲಾದ ಮೊಕದ್ದಮೆಗಳೆಷ್ಟು? ಅವುಗಳಲ್ಲಿ ಭೂಮಾಲೀಕರ ಮತ್ತು ಗೇಣಿದಾರರ ಪರವಾಗಿ ತೀರ್ಮಾನಿಸಲಾದ ಮೊಕದ್ದಮೆಗಳೆಷ್ಟು (ಪ್ರತ್ಯೇಕವಾದ ವಿವರ ನೀಡುವುದು).

ಆ) ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕು ಭೂನ್ಯಾಯ ಮಂಡಳಿಗಳಲ್ಲಿ ೧-೪-೮೩ರಿಂದ ೩೧-೩-೮೭ರವರೆಗೆ ಇತ್ಯರ್ಥವಾಗದಿರುವ ಮೊಕದ್ದಮೆಗಳೆಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿ ಯೋಜನಾ ಮಂತ್ರಿಗಳು). —

ಅ) ೧) ಉಚ್ಚ ನ್ಯಾಯಾಲಯದಿಂದ ಹಿಂದಿರುಗಿಸಿದ ಪ್ರಕರಣಗಳ ಸಂಖ್ಯೆ. ೪,೫೨೯.

೨) ಪ್ರಾಧಿಕಾರದಲ್ಲಿ ಸಾ ಪನೆಯಾದ ದಿನದಿಂದ ಸ್ವೀಕೃತವಾದ ಪ್ರಕರಣಗಳ ಸಂಖ್ಯೆ. ೪೪೦

ಒಟ್ಟು. ೪,೯೬೯

೩) ಪ್ರಾಧಿಕಾರದಲ್ಲಿ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ. (ದಿ.೩೦-೬-೮೭ರವರೆಗೆ) ೧೨೬

೪) ಗೇಣಿದಾರರ ಪರ —

೫) ಭೂಮಾಲೀಕರ ಪರ ೧

೬) ಇತರೆ (ತಿರಸ್ಕರಿಸಿದುದು, ವಜಾವಾದದ್ದು, ಇತರೆ) ೧೨೬

ಬಾಕಿಯಿರುವ ಪ್ರಕರಣಗಳು (ದಿ. ೩೦-೬-೮೭ರವರೆಗೆ) ೪,೮೪೨

ಆ)

ತಾಲ್ಲೂಕು	ದಿ. ೩೧-೫-೮೭ರವರೆಗೆ ಬಾಕಿ ಇರುವ ಪ್ರಕರಣಗಳು				ನ್ಯಾಯಾಲಯದಿಂದ ಹಿಂದಿರುಗಿದ್ದು	ಒಟ್ಟು
	ಸೆಕ್ಷನ್ ೪೭ಎ	ಸೆಕ್ಷನ್ ೪೮	ಸೆಕ್ಷನ್ ೬೬	ಇನಾಮು		
೧ ಕುಂದಾಪುರ	—	೨೨	—	—	೩೫೯	೩೬೧
೨ ಉಡುಪಿ	೩	೧೪೧	—	—	೧,೧೨೭	೧೩೧೧
೩ ಕಾರ್ಕಳ	೧೨	೬೦	—	—	೫೪೦	೬೧೨
೪ ಮಂಗಳೂರು	೫೩	೧೫೮೦	೫	—	೧೬೩೨	೩೨೭೦
೫ ಬಂಟ್ವಾಳ	೫೫	೫೬೮	—	—	೩೯೦	೧೦೧೩
೬ ಪುತ್ತೂರು	೧	—	—	—	೪೪೦	೪೪೧
೭ ಸೂಳ್ಯ	೪	—	—	—	೨೭೭	೨೮೧
೮ ಬೆಳ್ತಂಗಡಿ	—	೪೫	೨	—	೧೬೩	೨೦೦
						೭೪೮೯

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕುದಾಯ ಮಂತ್ರಿಗಳು ಈ ಬಗ್ಗೆ, ಉತ್ತರ ಕೊಟ್ಟಿದ್ದಾರೆ. ಪ್ರಾಧಿಕಾರದಲ್ಲಿ ಗೇಣಿದಾರರ ಪರವಾಗಿ ಹಾಗೂ ಭೂಮಾಲಿ ಕರ ಪರವಾಗಿ ಎಷ್ಟು ಮೇಲ್ಮನವಿಗಳು ಇತ್ಯರ್ಥವಾಗಿದೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಉತ್ತರವಾಗಿ ಗೇಣಿದಾರರಪರವಾಗಿ ಆಗಿಲ್ಲ ಎಂದು ಭೂಮಾಲೀಕರ ಪರವಾಗಿ ಒಂದು ಆಗಿದೆ ಎಂದು ಹಾಗೂ ೧೨೬ ಪ್ರಕರಣಗಳು ವಜಾ ಆಗಿವೆ ಎಂದು ಹೇಳಿದ್ದಾರೆ. ಬಾಕಿ ಇರುವ ಪ್ರಕರಣಗಳ ಬಗ್ಗೆ ಮಾನ್ಯ ಕಂದಾಯ ಸಚಿವರು ಪೂರ್ಣ ಮಾಹಿತಿ ಇಲ್ಲ ಎಂದು ಹೇಳಿರುವುದರಿಂದ ನಾನು ಆ ಬಗ್ಗೆ ಪ್ರಶ್ನೆ ಮಾಡಲು ಹೋಗುವುದಿಲ್ಲ. ಇತರ ಮಾಹಿತಿಗಳು ಏನು ಕಾಣುತ್ತವೆ ಅಂದರೆ ಪ್ರಾಧಿಕಾರದ ನ್ಯಾಯ ಮಂಡಳಿಯಿಂದ ವ್ಯವಹಾರಿಕವಾಗಿ ಸರಿಯಾಗಿ ನ್ಯಾಯ ಗೇಣಿದಾರರಿಗೆ ಸಿಗಲಿಕ್ಕೆ ಸಾಧ್ಯವಿಲ್ಲ. ಭೂ ನ್ಯಾಯಮಂಡಳಿಯಲ್ಲಿ ಸಾಮಾಜಿಕ ನ್ಯಾಯ ಸಿಗುತ್ತಿಲ್ಲವೆಂದು ತಮಗೆ ಮನವರಿಕೆಯಾಗಿದೆ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇಲ್ಮನವಿ ಪ್ರಧಿಕಾರದ ಮೇಲೆ ಅವರ ವ್ಯವಹಾರಗಳ ಮೇಲೆ ಸರ್ಕಾರದ ವಟ್ಟದಲ್ಲಿ ಯಾವರೀತಿಯಲ್ಲಿ ವ್ಯವಹಾರಿಕವಾಗಿ ಆಗುತ್ತಿದೆ ಎಂಬುದನ್ನೂ ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೋದ ತಿಂಗಳು ನಾನು ಮೈಸೂರು ಮತ್ತು ಬೆಳಗಾಂ ಡಿವಿಜನ್‌ಗಳಲ್ಲಿ ಪರಿಶೀಲನೆ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಅಂಕಿಸಂಖ್ಯೆಗಳನ್ನು ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜೋಟಲ್ ಕೇಳಿದರೆ ಕೊಡುತ್ತೇನೆ, ಇವತ್ತು ಇಲ್ಲ. ಈ ಪ್ರಶ್ನೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಹಾಗೆ ಮಾತ್ರ ಕೇಳಿದ್ದೀರಿ. ಇಡೀ ರಾಜ್ಯವನ್ನು ಕೇಳಿದರೆ ತರಿಸಿಕೊಡುತ್ತೇನೆ. ಪ್ರಾಧಿಕಾರದಲ್ಲಿ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ ೧೨೭ರಲ್ಲಿ ಒಂದು ಲ್ಯಾಂಡ್‌ಲಾರ್ಡ್ ಪರವಾಗಿ ಆಗಿದೆ. ಇದನ್ನು ತಾವು ಆರ್ಥ ಮಾಡಿಕೊಳ್ಳಬೇಕು. ವಿವರ ಇಲ್ಲದೇ ಇರುವುದರಿಂದ, ನೇರವಾಗಿ ಸ್ಪಷ್ಟವಾಗಿ ಹೇಳಲಿಕ್ಕೆ ಆಗಿಲ್ಲ, ನಾನು ಒಪ್ಪಿಕೊಳ್ಳುತ್ತಾ ಇದ್ದೇನೆ. ವಿವರಗಳನ್ನು ತರಿಸಿಕೊಡುತ್ತೇನೆ. ಇನ್ನು ಈ ಕೆಲಸ ಪ್ರಾರಂಭವಾದ ಮೇಲೆ ಕಛೇರಿ, ಸಿಬ್ಬಂದಿ, ಎಸ್ಟಾಬ್ಲಿಷ್‌ಮೆಂಟ್ ಅದೆಲ್ಲಾ ಆಗುವುದು ತಡವಾಗಿದೆ. ಮಿಟಿಂಗ್ ಮಾಡಿ ಪ್ರತಿಯೊಂದು ಅಪಿಲೇಟ್ ಟ್ರಿಬ್ಯುನಲ್‌ನಲ್ಲಿ ೫೦ ಕೇಸುಗಳನ್ನು ಇತ್ಯರ್ಥ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಲೋಕಲ್ ಇನ್ಸ್‌ಪೆಕ್ಷನ್, ಎವಿಡೆನ್ಸ್ ಇದನ್ನೆಲ್ಲಾ ಮಾಡಿಕೊಂಡು ನೀವು ಕನಿಷ್ಟ ಪಕ್ಷ ೫೦ ಕೇಸುಗಳನ್ನು ಇತ್ಯರ್ಥ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಬೇಗ ಎಲ್ಲ ಪ್ರಕರಣಗಳು ಇತ್ಯರ್ಥವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ದಕ್ಷಿಣ ಕನ್ನಡ ಜಿಲ್ಲೆ ಅಲ್ಲದೆ ಕರ್ನಾಟಕ ರಾಜ್ಯದ ಬೇರೆ ಕಡೆಗಳಿಂದ ಮೇಲ್ಮನವಿ ಪ್ರಾಧಿಕಾರದಿಂದ ಗೇಣಿದಾರರಿಗೆ ಸರಿಯಾದ ನ್ಯಾಯ ಸಿಗುವುದಿಲ್ಲವೆಂದು ದೂರು ಬಂದಿರುವುದು ನಿಜವೇ ಎರಡನೆಯದಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾವು ಬೇರೆ ಹೆಚ್ಚುವರಿ ಮೇಲ್ಮನವಿ ಪ್ರಾಧಿಕಾರದ ಸವಿಂತಿಗಳನ್ನು ಮಾಡಿ ಕಾರ್ಕಳವನ್ನು ಕುಂದಾಪುರಕ್ಕೆ ಸೇರಿಸಿದ್ದಾರೆ. ಕಾರ್ಕಳವನ್ನು ಮಂಗಳೂರು ಅಥವಾ ಉಡುಪಿಗೆ ಸೇರಿಸಬೇಕಾಗಿತ್ತು. ಆ ರೀತಿ ಮಾಡಿದರೆ ಭೌಗೋಳಿಕವಾಗಿ ಗೇಣಿದಾರರಿಗೆ, ಹಾಗೂ ಕಕ್ಷಿದಾರರಿಗೆ ಅನಾನುಕೂಲವಾಗುತ್ತದೆ. ಅದನ್ನು ಪರಿಶೀಲನೆ ಮಾಡಿ. ನನ್ನ (ಆ) ಪ್ರಶ್ನೆ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕು ಭೂನ್ಯಾಯ ಮಂಡಳಿಗಳಲ್ಲಿ ೧-೪-೭೩ ರಿಂದ ೩೧-೩-೭೭ ರವರೆಗೆ ಇತ್ಯರ್ಥವಾಗದಿರುವ ಮೊಕದ್ದಮೆಗಳೆಷ್ಟು ಎಂದು ಕೇಳಿದ್ದಕ್ಕೆ ೭೪೮೯ ಎಂದು ಹೇಳಿದ್ದೀರಿ. ಆದರಲ್ಲಿ ತೀರ್ಮಾನವಾದಂತಹ ಕೇಸುಗಳು ಎಷ್ಟು ? ಗೇಣಿದಾರರ ಪರವಾಗಿ ಆದ ಕೇಸುಗಳು ಎಷ್ಟು ? ಭೂಮಾಲೀಕರ ಪರವಾಗಿ ಆದ ಕೇಸುಗಳು ಎಷ್ಟು ? ಕೊನೆಯದಾಗಿ, ಪಕೇಲರು ಭೂನ್ಯಾಯ ಮಂಡಳಿಗಳಲ್ಲಿ ವ್ಯವಹರಿಸಬೇಕು ಎನ್ನುವುದನ್ನು ಬಿಡಬೇಕು. ಸುಪ್ರೀಂ ಕೋರ್ಟ್ ಈ ಬಗ್ಗೆ ತೀರ್ಮಾನ ಕೊಟ್ಟಿರ ಬಹುದು, ಆದ್ದರಿಂದ ಕೇಸುಗಳು ಬೇಗ ಇತ್ಯರ್ಥ ವಾಗುವುದಿಲ್ಲ. ಜೊತೆಗೆ ಭೂನ್ಯಾಯ ಮಂಡಳಿಗಳು ಸಾಮಾಜಿಕ ಸಿದ್ಧಾಂತದ ಮೇಲೆ ಸ್ಥಾಪನೆ ಯಾಗಿವೆ. ಸಿದ್ಧಾಂತವನ್ನು ಅಡಿಮೇಲು ಮಾಡುವುದರಿಂದ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಪರಿಶೀಲನೆ ಮಾಡಿ ಅದಕ್ಕೆ ತಿದ್ದುಪಡಿ ಮಾಡಿ ನ್ಯಾಯವಾದಿಗಳು ಭೂನ್ಯಾಯ ಮಂಡಳಿಗಳಲ್ಲಿ ವ್ಯವಹರಿಸದ ಹಾಗೆ ಕಾನೂನು ತರಲಿಕ್ಕೆ ಆಲೋಚನೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾರ್ಕಳ ತಾಲ್ಲೂಕನ್ನು ಮಂಗಳೂರು ಅಥವಾ ಉಡುಪಿ ತಾಲ್ಲೂಕಿಗೆ ಸೇರಿಸಬೇಕೆಂದು ಸಲಹೆ ಮಾಡಿದ್ದಾರೆ, ಅದನ್ನು ಪರಶೀಲನೆ ಮಾಡಿ ತೀರ್ಮಾನ ತೆಗೆದು ಕೊಳ್ಳುತ್ತೇನೆ. ಸುಪ್ರೀಂ ಕೋರ್ಟ್‌ನ ನಿರ್ಣಯವಾಗಿದೆ. ಸರ್ಕಾರದ ಸ್ಪಷ್ಟ ಅಭಿಪ್ರಾಯ ಭೂನ್ಯಾಯಮಂಡಳಿಗಳಲ್ಲಿ ನ್ಯಾಯವಾದಿಗಳ ಅವಶ್ಯಕತೆ ಇಲ್ಲ ಎನ್ನುವುದು. ಇದು ಸರ್ಕಾರದ ನೀತಿ ಯಾಗಿದೆ. ಈ ಬಗ್ಗೆ ಕಾನೂನು ಇಲಾಖೆ ಅಧ್ಯಾಯನ ಮಾಡುತ್ತಿದೆ ಈ ಬಗ್ಗೆ ಕಾನೂನಿಗೆ ಸೂಕ್ತ ತಿದ್ದುಪಡಿಯನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ತರೀಕೆರೆಯಲ್ಲಿರುವ ರೈತರಿಗೆ ಭೂಮಿಯನ್ನು ಹಿಂತಿರುಗಿಸುವುದು

೫೫೪. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) — ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಂಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನಲ್ಲಿ ರೈತರು ಕಂದಾಯ ಹಣವನ್ನು ಕಟ್ಟದೆ ಸರ್ಕಾರದ ಸ್ವಾಧೀನಕ್ಕೆ ಬಂದ ಜಮೀನುಗಳ ವಿಸ್ತೀರ್ಣವೆಷ್ಟು ?